**ನಿರ್ವಹಣಾ ಕ್ರಮಗಳು :**

- ಎಲೆ ಹಾಗೂ ಹಣ್ಣುಗಳಿಗೆ 2 ಗ್ರಾಂ ಮ್ಯಾಂಕೋಜೆಬ್ ಅಥವಾ 2 ಗ್ರಾಂ ಕ್ಲೋರೋಥೈಲೊನಿಲ್ ಅಥವಾ 1 ಗ್ರಾಂ ಕಾರ್ಬನ್‌ಡೈಜಿಮ್ ಪ್ರತಿ ಲೀಟರ್ ನೀರಿಗೆ ಕರಗಿಸಿ ಸಿಂಪರಣೆ ಮಾಡಬೇಕು.
- ನಾಟಿ ಮಾಡುವ ಮೊದಲು ಬೇವಿನ ಹಿಂಡಿ ಮತ್ತು ಟ್ರೈಕೋಡರ್ಮವನ್ನು ಹಾಕಬೇಕು.
- ನಾಟಿ ಮಾಡಿದ ಮೇಲೆ 1 ಮಿ. ಲೀ. ಟ್ರೈಡೆಮಾರ್ಫ ಅಥವಾ 2 ಗ್ರಾಂ ಮೆಟಾಲಾಕ್ಸಿಲ್ ಮತ್ತು ಮ್ಯಾಂಕೋಜೆಬ್ 15 ದಿನಗಳ ಅಂತರದಲ್ಲಿ ಹಾಕಬೇಕು.

## 3. ಉಂಗುರ ಚುಕ್ಕೆ ಮೊಸಾಯಿಕ್ ನಂಜು ರೋಗ

**ರೋಗದ ಲಕ್ಷಣಗಳು :**

- ಎಲೆಗಳು ಹಳದಿ ಹಸಿರು ತೇಪೆಗಳಿಂದ ಕೂಡಿರುತ್ತವೆ.
- ಎಳೆ ಎಲೆಗಳಲ್ಲಿ ಹಳದಿ ಉಂಗುರದ ಚುಕ್ಕೆ ಕಂಡು ಬಂದು ತೀವ್ರವಾಗಿ, ಎಲೆ ವಿಕಾರತೆ ಉಂಟಾಗಿ ಇಲಿ ಬಾಲದಂತಾಗುತ್ತದೆ.
- ಕಾಂಡಗಳ ಮೇಲೆ ಉಂಗುರದಂತಹ ಚುಕ್ಕೆ ಕಂಡು ಬಂದು ಒಣಗಬಹುದು ಮತ್ತು ನಂತರ ಬೆಳವಣಿಗೆ ಕುಂಠಿತಗೊಳ್ಳುವುದು.
- ಬೆಳೆಯುವ ಕಾಯಿಗಳ ಮೇಲೆ ಉಣ್ಣೆ ಸೋಂಕಿತ ಉಂಗುರದಾಕಾರದ ಚುಕ್ಕೆಗಳು ಕಂಡು ಬಂದು ಹಣ್ಣುಗಳ ಆಕಾರ ಹಾಗೂ ಗಾತ್ರ ಸಣ್ಣಗಾಗುತ್ತದೆ. ಇಂತಹ ಹಣ್ಣನ್ನು ಹೆಚ್ಚಿನ ದಿವಸ ಶೇಖರಣೆ ಮಾಡಲು ಸಾಧ್ಯವಿಲ್ಲ.



**ನಿರ್ವಹಣಾ ಕ್ರಮಗಳು**

- ನಾಟಿ ಮಾಡುವಾಗ ಮೊಸಾಯಿಕ್ ನಂಜುರೋಗ ಮತ್ತು ಎಲೆ ಮುಟುರು ರೋಗದಿಂದ ಮುಕ್ತವಾದ ಸಸಿಗಳನ್ನು ಉಪಯೋಗಿಸಬೇಕು.
- ನಂಜು ರೋಗ ಬಾಧೆಗೊಳಗಾದ ಸಸಿ ಗಿಡಗಳನ್ನು ಕೂಡಲೇ ನಾಶಗೊಳಿಸಬೇಕು.
- ನರ್ಸರಿಯಲ್ಲಿ ನೈಲಾನ್ ಜಾಳಿಗೆಯನ್ನು ಉಪಯೋಗಿಸುವುದರಿಂದ ಸ್ವಲ್ಪ ಮಟ್ಟಿಗೆ ರೋಗ ಹರಡುವ ಕೀಟಗಳನ್ನು ಹತೋಟಿಯಲ್ಲಿಡಬಹುದು.
- ಜೂನ್–ಜುಲೈ ತಿಂಗಳುಗಳಲ್ಲಿ ನಾಟಿ ಮಾಡುವುದರಿಂದ ನಂಜಾಣು ರೋಗದ ಬಾಧೆ ಕಡಿಮೆಯಾಗುತ್ತದೆ. ರೋಗ ರಹಿತ ಸಸಿಗಳನ್ನು ನಾಟಿಗಾಗಿ ಉಪಯೋಗಿಸುವುದು ಉತ್ತಮ
- ಪಪಾಯ ತೋಟದಲ್ಲಿ ನಿತ್ಯ ತಿರುಗಾಡಿ ನಂಜಾಣು ಪೀಡಿತ ಸಸಿಗಳನ್ನು ಗುರುತಿಸಿ ಕಿತ್ತು ನಾಶಪಡಿಸಬೇಕು.

## 4. ಎಲೆ ಮುಟುರು ರೋಗ

**ರೋಗದ ಲಕ್ಷಣಗಳು**

ಎಲೆಗಳು ತೀವ್ರವಾಗಿ ಮುದುಡಿ ಒರಟಾಗುತ್ತದೆ ಮತ್ತು ಎಲೆದೇಟು ಡೊಂಕಾಗಿ ಬಾಗುತ್ತದೆ, ಗಿಡಗಳ ಬೆಳವಣಿಗೆ ಕುಂಠಿತವಾಗಿ ಕಾಯಿಗಳು ಬಹಳ ಚಿಕ್ಕದಾಗಿ ಕಾಣುತ್ತವೆ. ಗಿಡಗಳಲ್ಲಿ ಬಿಳಿ ನೊಣಗಳು ಹೆಚ್ಚಾಗಿ ಕಂಡು ಬರುತ್ತವೆ.

**ನಿರ್ವಹಣಾ ಕ್ರಮಗಳು :**

- ಸಸಿಗಳಿಗೆ ತಪ್ಪದೆ 10–12 ದಿನಗಳ ಅಂತರದಲ್ಲಿ ಅಂತರವ್ಯಾಪಿ ಕೀಟನಾಶಕಗಳನ್ನು ಬಳಸುವುದು. ಉದಾ: 1.7 ಮಿ. ಲೀ. ಡೈಮಿಥೋಮೇಟ್ 30 ಇ.ಸಿ. ಅಥವಾ 1.5 ಮಿ.ಲೀ. ಆಕ್ಸಿಡೆಮಿಟಾನ್ ಮಿಥೈಲ್ 25 ಇ.ಸಿ. ಅಥವಾ 0.25 ಮಿ. ಲೀ. ಇಮಿಡಾಕ್ಲೊಪ್ರಿಡ್ ಅಥವಾ 0.20 ಥಿಯೋಮಿಥಾಕ್ಸಾಮ್ ಅಥವಾ 1.0 ಗ್ರಾಂ ಅಸಿಫೇಟ್ 70 ಎಸ್.ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸುವುದು.
- ಆಗಾಗ್ಗೆ ಕೀಟನಾಶಕ ಬದಲಿ ಶೇ. 5 ರ ಬೇವಿನ ಬೀಜದ ಕಷಾಯ ಸಿಂಪರಿಸುವುದು. ಇದರ ಬದಲಾಗಿ 1500 ಪಿ.ಪಿ.ಎಮ್. ಇದ್ದ ಅಜಾಡಿರಕ್ಟಿನ್ ಬೇವು ಮೂಲದ ಕೀಟನಾಶಕವನ್ನು 2 ಮಿ. ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಿಸುವುದು. ನಾಟಿ ಮಾಡುವ ಮೊದಲು ಪ್ರತಿ ಗುಂಡಿಗೆ 10 ಗ್ರಾಂ ಕಾರ್ಬೋಫ್ಯುರಾನ್ 3 ಜಿ. ಬಳಸುವುದು ಸೂಕ್ತ.
- ಶೇ. 1ರ ಬೇವಿನ ಎಣ್ಣೆ ಅಥವಾ ಶೇಂಗಾ ಎಣ್ಣೆ (10 ಮಿ. ಲೀ./ ಲೀಟರ್ ನೀರಿಗೆ) ಕೀಟನಾಶಕದ ಜೊತೆ ಸಿಂಪರಿಸುವುದರಿಂದ ಹೆಚ್ಚಿನ ಹತೋಟಿ ಸಾಧ್ಯ ಎಂದು ತಜ್ಞರ ಅಭಿಪ್ರಾಯವಾಗಿದೆ.
- ಪಪಾಯ ತೋಟದ ಸುತ್ತ ಹತ್ತಿ, ಬದನೆ ಮತ್ತು ಕುಂಬಳ ಜಾತಿಯ ಬೆಳೆಗಳನ್ನು ಬೆಳೆಯ ಕೂಡದು. ಹಳೆಯ ಪಪಾಯ ತೋಟದ ಸಮೀಪ ಪಪಾಯ ಸಸಿ ತಯಾರಿಸುವುದು ಸೂಕ್ತವಲ್ಲ ಇದರಿಂದ ಸಸಿ ಹಂತದಲ್ಲಿಯೇ ನಂಜಾಣು ರೋಗದ ಬಾಧೆಯನ್ನು ತಡೆಗಟ್ಟಬಹುದು.

## 5. ಬೂದು ರೋಗ

**ರೋಗದ ಲಕ್ಷಣಗಳು**



- ಎಲೆಗಳ ತಳಭಾಗದಲ್ಲಿ ಹಿಟ್ಟಿನಂತಹ ಬೆಳವಣಿಗೆ ಕಂಡು ಬಂದು ಎಲೆ ಮೇಲ್ಭಾಗ ಹಳದಿ ವರ್ಣಕ್ಕೆ ತಿರುಗಿ, ಎಲೆಗಳು ಮುದುರುತ್ತವೆ ಹಾಗೂ ಉದುರುತ್ತವೆ.
- ಎಳೆ ಕಾಂಡ ಹಾಗೂ ಟೊಂಗೆಗಳ ಮೇಲೂ ಬಿಳಿ ಶಿಲೀಂಧ್ರದ ಬೆಳವಣಿಗೆ ಆವರಿಸಿ ಕಾಂಡದ ತುದಿಗಳು ಬಾಡುತ್ತವೆ ಮತ್ತು ಮಿಡಿಗಾಯಿಗಳ ಮೇಲೂ ಹಬ್ಬಿ ಅವು ಉದುರುವಂತೆ ಮಾಡುತ್ತದೆ

**ನಿರ್ವಹಣಾ ಕ್ರಮಗಳು :**

- ಹತೋಟಿಗಾಗಿ ಶೇ. 80 ರ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕ ಅಥವಾ 1 ಗ್ರಾಂ ಕಾರ್ಬೆನ್‌ಡೈಜಿಯಂ 50 ಡಬ್ಲ್ಯೂ.ಪಿ. ಅಥವಾ 2 ಮಿ. ಲೀ. ಡೈಕೋಫಾಲ್ 20 ಇ.ಸಿ. ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

**ಪ್ರಕಟಣೆ:**
**ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ**
**ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು**

*Technical Folder Series No. 04/2020*

ICAR

**ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

**ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ**
**ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು**

# ಪಪಾಯದಲ್ಲಿ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ



ತಾಂತ್ರಿಕ ಮಾಹಿತಿ
ಡಾ. ಕೇದಾರನಾಥ
ಶ್ರೀಮತಿ ಸಂಘಮಿತ್ರೆ ಎ. ಕೆ.
ಡಾ. ರಮೇಶ ಟಿ. ಜೆ.
ಡಾ. ರಶ್ಮಿ ಆರ್.
ಡಾ. ಚೇತನ್ ಎನ್.
ಡಾ. ನವೀನ್‌ಕುಮಾರ್ ಬಿ. ಟಿ.
ಡಾ. ಮಲ್ಲಿಕಾರ್ಜುನ ಎಲ್.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,
ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,
ಮಂಗಳೂರು, ದಕ್ಷಿಣ ಕನ್ನಡ – 575002
www.kvkdk.org, kvkdk@rediffmail.com, 0824–2431872

ಮಾರ್ಚ್, 2020

ಪಪಾಯ ಒಂದು ಪ್ರಮುಖ ಹಣ್ಣಿನ ಬೆಳೆಯಾಗಿದ್ದು, ಮೆಕ್ಸಿಕೋ ದೇಶ ಇದರ ಮೂಲಸ್ಥಾನವಾಗಿದೆ. ಈ ಬೆಳೆಯನ್ನು ನಮ್ಮ ದೇಶಕ್ಕೆ ಡಚ್ಚರು, ಪೋರ್ಚುಗೀಸರು ಪರಿಚಯಿಸಿದ್ದರಿಂದ ಇದನ್ನು "ಫರಂಗಿ" ಹಣ್ಣು ಎಂದು ಕರೆಯುತ್ತಾರೆ. ಪಪಾಯವು ಶೀಘ್ರ ಫಲ ಕೊಡುವ ಹಣ್ಣಿನ ಬೆಳೆ, ಇದರಲ್ಲಿ ದೇಹದ ಪೋಷಣೆಗೆ ಬೇಕಾದ "ಎ" ಮತ್ತು "ಸಿ" ಜೀವಸತ್ವಗಳು ಸಂಪದ್ಭರಿತವಾಗಿದ್ದು, ಹಲವಾರು ಔಷಧೀಯ ಗುಣಗಳನ್ನು ಹೊಂದಿದೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಡೆಂಗ್ಯೂ ಜ್ವರಕ್ಕೆ ಇದರ ಎಲೆಯ ರಸ ರಾಮಬಾಣವಾದ ಕಾರಣ ಇದರ ಪ್ರಾಮುಖ್ಯತೆ ಮತ್ತಷ್ಟು ಹೆಚ್ಚಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಪಾಯದ ಉತ್ಪಾದನೆಯು ಸುಮಾರು 340 ಟನ್‌ಗಳಷ್ಟಿದೆ (2018–19). ಪೆಪೇನ್ ಎಂಬ ಬೆಲೆ ಬಾಳುವ ಕಿಣ್ವವನ್ನು ಪಪಾಯ ಕಾಯಿಯ ಹಾಲಿನಿಂದ ತಯಾರಿಸುತ್ತಾರೆ. ಈ ಪೆಪೇನ್‌ನ್ನು ಔಷಧಿಗಳ ತಯಾರಿಕೆ ಮತ್ತು ಇನ್ನಿತರೆ ಹಲವಾರು ಉದ್ದೇಶಗಳಿಗಾಗಿ ಬಳಸುತ್ತಾರೆ. ಅತ್ಯಂತ ಕಡಿಮೆ ಖರ್ಚಿನಲ್ಲಿ, ಹೆಚ್ಚು ಆದಾಯ ತರುವ, ವರ್ಷವಿಡೀ ದೊರೆಯುವ ಈ ಹಣ್ಣು ಕಣ್ಣಿಗೆ ಮತ್ತು ಮಧುಮೇಹ ನಿವಾರಣೆಗೆ ಬಹು ಉಪಕಾರಿ. ಹಾಗಾಗಿ ಇದನ್ನು "ಬಡವರ ಬಾದಾಮಿ" ಎಂದರೆ ಅತಿಶಯವಿಲ್ಲ.

ಪಪಾಯ ಒಂದು ಮಹತ್ವದ ಶೀಘ್ರ ಫಲ ಕೊಡುವ ಹಣ್ಣಿನ ಬೆಳೆಯಾಗಿದ್ದು ಕೆಲವೊಂದು ಋತುಮಾನಕ್ಕೆ ಅನುಗುಣವಾಗಿ ಬರುವ ಕೀಟ ಮತ್ತು ರೋಗಗಳ ಸಮಸ್ಯೆಗಳಿಂದ ಇದರ ಇಳುವರಿಯಲ್ಲಿ ತೀವ್ರ ಕುಸಿತ ಉಂಟಾಗಿ ರೈತರು ತೊಂದರೆಗೀಡಾಗುತ್ತಿರುವುದು ದಿನನಿತ್ಯದ ಮಾತಾಗಿದೆ. ಆದ್ದರಿಂದ ಈ ಕೀಟ ಹಾಗೂ ರೋಗಗಳ ಸಮಸ್ಯೆಯನ್ನು ಆದಷ್ಟು ಬೇಗ ಗುರುತಿಸಿ ಸೂಕ್ತ ಸಮಯದಲ್ಲಿ ಹತೋಟಿ ಕ್ರಮಗಳನ್ನು ಅನುಸರಿಸಿದರೆ ಪಪಾಯ ಕೃಷಿಯನ್ನು ಹೆಚ್ಚು ಲಾಭದಾಯಕ ಕೃಷಿಯನ್ನಾಗಿ ಮಾಡಬಹುದು. ಪಪಾಯಕ್ಕೆ ಬಾಧಿಸುವ ಪ್ರಮುಖ ಕೀಟ ಮತ್ತು ರೋಗಗಳು:



**ಪ್ರಮುಖ ಕೀಟಗಳು:**

**1. ಹಿಟ್ಟುತಿಗಣೆ**

**ಬಾಧೆಯ ಲಕ್ಷಣಗಳು:**

ಬಿಳಿ ಹಿಟ್ಟಿನಂತಹ ತಿಗಣೆಗಳು ಗುಂಪಾಗಿದ್ದು, ಎಲೆ, ಕಾಂಡ ಮತ್ತು ಹಣ್ಣುಗಳ ಮೇಲೆ ಗುಂಪಾಗಿ ಕಂಡುಬಂದು ಬಾಧೆಗೊಳಗಾದ ಪ್ರದೇಶದಿಂದ ರಸ ಹೀರುತ್ತವೆ. ಬಾಧೆ ಅಧಿಕವಾದಲ್ಲಿ ಎಲೆಗಳು ಹಳದಿಯಾಗಿ ಒಣಗುತ್ತವೆ.

**ನಿರ್ವಹಣಾ ಕ್ರಮಗಳು**

- ಒಂದು ಹೆಕ್ಟೇರ್ ಪ್ರದೇಶಕ್ಕೆ 100 ಅಸೆರೋಫಾಗಸ್ ಪಪಾಯಿ ಎಂಬ ಪರಾವಲಂಬಿ ಜೀವಿಗಳನ್ನು ಬಿಡುವುದರಿಂದ ಹಿಟ್ಟು ತಿಗಣೆಯನ್ನು ನಿರ್ವಹಣೆ ಮಾಡಬಹುದು.
- ಶೇ. 5 ರ ಬೇವಿನ ಬೀಜದ ಕಷಾಯ ಸಿಂಪಡಿಸುವುದು. ಇದರ ಬದಲಾಗಿ 1500 ಪಿ.ಪಿ.ಎಮ್. ಅಜಾಡಿರಕ್ಟಿನ್ 2 ಮಿ.ಲೀ. ಬೇವು ಮೂಲದ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು.
- ಆಗಿಂದಾಗ್ಗೆ ಶೇ. 5 ರ ಬೇವಿನ ಬೀಜದ ಕಷಾಯ ಸಿಂಪಡಿಸುವುದು.
- ಹಿಟ್ಟು ತಿಗಣೆ ಕಾಣಿಸಿಕೊಂಡಾಗ ಲೀಟರ್ ನೀರಿಗೆ 1.7 ಮಿ. ಲೀ. ಡೈಮಿಥೊಯೇಟ್ 30 ಇ.ಸಿ. ಅಥವಾ 0.3 ಮಿ. ಲೀ ಇಮಿಡಾಕ್ಲೊಪ್ರಿಡ್ 17.8 ಎಸ್.ಎಲ್. ಅಥವಾ 0.2 ಗ್ರಾಂ. ಆಸಿಟೋಮೊಪ್ರೈಡ್ 25 ಡಬ್ಲ್ಯೂ.ಪಿ. ಅಥವಾ 0.5 ಅಥವಾ 1.0 ಗ್ರಾಂ ಅಸಿಫೇಟ್ 75 ಎಸ್.ಪಿ. ಸೇರಿಸಿ ಸಿಂಪಡಿಸುವುದು.



**2. ಸಸ್ಯಹೇನು**

**ಬಾಧೆಯ ಲಕ್ಷಣಗಳು**

ಎಲೆಗಳಿಂದ ರಸಹೀರುವುದರ ಜೊತೆಗೆ ನಂಜಾಣು ರೋಗವನ್ನು ಹರಡುತ್ತದೆ.

**ನಿರ್ವಹಣಾ ಕ್ರಮಗಳು**

- ತೋಟದ ಸುತ್ತ ಹತ್ತಿ, ಬದನೆ ಮತ್ತು ಕುಂಬಳ ಜಾತಿಯ ಬೆಳೆಗಳನ್ನು ಬೆಳೆಯಬಾರದು.
- ಶೇ. 5 ರ ಬೇವಿನ ಬೀಜದ ಕಷಾಯ ಸಿಂಪಡಿಸುವುದು. ಇದರ ಬದಲಾಗಿ 1500 ಪಿ.ಪಿ.ಎಮ್. ಅಜಾಡಿರಕ್ಟಿನ್ 2 ಮಿ.ಲೀ. ಬೇವು ಮೂಲದ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು.
- ಶೇ. 1 ರ ಬೇವಿನ ಎಣ್ಣೆ ಅಥವಾ ಶೇಂಗಾ ಎಣ್ಣೆ (10 ಮಿ. ಲೀ. / ಲೀಟರ್ ನೀರಿಗೆ) ಸಿಂಪಡಿಸುವುದರಿಂದ ನಂಜಾಣು ಪ್ರಸಾರ ತಡೆಗಟ್ಟಬಹುದು.
- ಸಸಿಗಳಿಗೆ / ಗಿಡಗಳಿಗೆ ತಪ್ಪದೇ 10–12 ದಿನ ಅಂತರದಲ್ಲಿ ಅಂತರವ್ಯಾಪಿ ಕೀಟನಾಶಕಗಳನ್ನು ಬಳಸುವುದು ಉದಾ: 1.7 ಮಿ.ಲೀ.ಡೈಮಿಥೋಯೇಟ್ 30 ಇ.ಸಿ. ಅಥವಾ 0.2 ಮಿ.ಲೀ ಇಮಿಡಾಕ್ಲೊಪ್ರಿಡ್ ಅಥವಾ 0.2 ಗ್ರಾಂ. ಆಸಿಟೋಮೊಪ್ರೈಡ್ ಅಥವಾ 0.5 ಮಿ.ಲೀ. ಫಾಸ್ಫಾಮಿಡಾನ್ ಅಥವಾ 1.0 ಗ್ರಾಂ ಅಸಿಫೇಟ್ 75 ಎಸ್.ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು.



**3. ಬಿಳಿ ನೊಣ**

**ಬಾಧೆಯ ಲಕ್ಷಣಗಳು :**

ಎಲೆಗಳಿಂದ ರಸಹೀರುವುದರ ಜೊತೆಗೆ ನಂಜಾಣು ರೋಗ ಹರಡುತ್ತದೆ.

**ನಿರ್ವಹಣಾ ಕ್ರಮಗಳು :**

- ತೋಟದ ಸುತ್ತ ಹತ್ತಿ, ಬದನೆ ಮತ್ತು ಕುಂಬಳ ಜಾತಿಯ ಬೆಳೆಗಳನ್ನು ಬೆಳೆಯಬಾರದು.
- ಶೇ. 5 ರ ಬೇವಿನ ಬೀಜದ ಕಷಾಯ ಸಿಂಪಡಿಸುವುದು. ಇದರ ಬದಲಾಗಿ 1500 ಪಿ.ಪಿ.ಎಮ್. ಅಜಾಡಿರಕ್ಟಿನ್ 2 ಮಿ.ಲೀ. ಬೇವು ಮೂಲದ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು.
- ಶೇ. 1 ರ ಬೇವಿನ ಎಣ್ಣೆ ಅಥವಾ ಶೇಂಗಾ ಎಣ್ಣೆ (10 ಮಿ. ಲೀ. / ಲೀಟರ್ ನೀರಿಗೆ) ಸಿಂಪಡಿಸುವುದರಿಂದ ನಂಜಾಣು ಪ್ರಸಾರ ತಡೆಗಟ್ಟಬಹುದು.
- ಸಸಿಗಳಿಗೆ / ಗಿಡಗಳಿಗೆ ತಪ್ಪದೇ 10–12 ದಿನ ಅಂತರದಲ್ಲಿ ಅಂತರವ್ಯಾಪಿ ಕೀಟನಾಶಕಗಳನ್ನು ಬಳಸುವುದು ಉದಾ: 1.7 ಮಿ.ಲೀ.ಡೈಮಿಥೋಯೇಟ್ 30 ಇ.ಸಿ. ಅಥವಾ 0.2 ಮಿ.ಲೀ ಇಮಿಡಾಕ್ಲೊಪ್ರಿಡ್ ಅಥವಾ 0.2 ಗ್ರಾಂ. ಆಸಿಟೋಮೊಪ್ರೈಡ್ ಅಥವಾ 0.5 ಮಿ.ಲೀ. ಫಾಸ್ಫಾಮಿಡಾನ್ ಅಥವಾ 1.0 ಗ್ರಾಂ ಅಸಿಫೇಟ್ 75 ಎಸ್.ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು.

**4. ಮಿಲ್ಲೋಸಿರಸ್ ಮೂತಿ ಹುಳು (ಬೂದು ಬಣ್ಣದ ದುಂಬಿ)**

**ಬಾಧೆಯ ಲಕ್ಷಣಗಳು :**

ಪ್ರೌಢ ದುಂಬಿಗಳು ಎಲೆಗಳನ್ನು ಅಂಚಿನಿಂದ ತಿನ್ನುತ್ತವೆ ಮತ್ತು ಮರಿಹುಳುಗಳು ಬೇರುಗಳನ್ನು ತಿಂದು ಗಿಡವನ್ನು ಹಾಳು ಮಾಡುತ್ತವೆ.

**ನಿರ್ವಹಣಾ ಕ್ರಮಗಳು :**

ಕೀಟ ಬಾಧೆ ಕಂಡು ಬಂದಾಗ ಲೀ. ನೀರಿಗೆ 2.0 ಮಿ. ಲೀ. ಕ್ವಿನಾಲ್‌ಫಾಸ್ 25 ಇ.ಸಿ. ಸಿಂಪರಣೆ ಮಾಡಬೇಕು.

**ಪ್ರಮುಖ ರೋಗಗಳು**

**1. ಬುಡಕೊಳೆ ರೋಗ**

**ರೋಗದ ಲಕ್ಷಣಗಳು :**

- ಭೂಮಿಗೆ ಹತ್ತಿರದ ಕಾಂಡದ ಮೇಲೆ ಕಂದು ತೇಪೆ ಕಂಡು ಬಂದು ಕಾಂಡ ಕೊಳೆಯುವುದು.
- ಸಸಿ ಹಂತದಲ್ಲಿ ಈ ರೋಗ ಬಂದರೆ ಸಸಿಗಳು ಸಾಯುತ್ತವೆ.



**ನಿರ್ವಹಣಾ ಕ್ರಮಗಳು**

ನೀರು ಚೆನ್ನಾಗಿ ಬಸಿದು ಹೋಗುವಂತೆ ನೋಡಿಕೊಳ್ಳಬೇಕು ಮತ್ತು ಭೂಮಿಗೆ ಶೇ. 2 ರ ಬೋರ್ಡೋ ದ್ರಾವಣವನ್ನು ಗಿಡಗಳ ಸುತ್ತಲೂ ಹಾಕಬೇಕು.

**2. ಚಿಬ್ಬುರೋಗ (ಅಂತ್ರಾಕ್ನೋಸ್)**

**ರೋಗದ ಲಕ್ಷಣಗಳು**

- ಎಲೆಗಳ ಮೇಲೆ ಕಂದು ಬಣ್ಣದ ಚುಕ್ಕೆಗಳು ವೃದ್ಧಿಗೊಂಡು ತೀವ್ರವಾಗಿ ಎಲೆ ಸುಟ್ಟಂತೆ ಕಾಣುತ್ತದೆ.
- ಹಣ್ಣುಗಳ ಮೇಲೂ ಚುಕ್ಕೆ ಕಂಡು ಬಂದು ಮಾಗುವ ಹಂತದಲ್ಲಿ ತೀವ್ರವಾಗಿ ಹಬ್ಬಿ, ಹಣ್ಣು ಕೊಳೆಯುವಂತೆ ಮಾಡುತ್ತದೆ

